ಓ ಎಸ್ ನಂ. 5/2015
ಪಿ ಡಬ್ಲ್ಯು 1
ದಿನಾಂಕ 05-04-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಗಳ ಪರಃ ಶ್ರೀ ಬಿ ಆರ್ ವಕೀಲರಿಂದಃ

ಹುಲ್ಲೇಹಳ್ಳಿ ಗ್ರಾಮದ ಸರ್ವೆ ನಂ. 152/2 ಕ್ಕೆ ಸಂಬಂದಪಟ್ಟಂತೆ ನಿಪಿ-70 ರಂತೆ ಒಂದು ಪಕ್ಕಾ ಪುಸ್ತಕವನ್ನು ಹಾಜರುಪಡಿಸಿದ್ದು ಸದರಿ ಸರ್ವೆ ನಂಬರಿನ ವಿಸ್ತೀರ್ಣ ಎಷ್ಟು ಎಂದರೆ ಸಾಕ್ಷಿ 1 ಎಕರೆ 28 ಗುಂಟೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ-70 ರ ದಾಖಲೆಯನ್ನು ತೋರಿಸಿ ಅದರಲ್ಲಿ ಎಷ್ಟು ವಿಸ್ತೀರ್ಣ ನಮೂದು ಇದೆ ಎಂದರೆ ಸಾಕ್ಷಿ 18 ಗುಂಟೆ ಎಂದು ನಮೂದು ಇರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂ.152/2 ರ ಪಹಣಿ ಯಾರ ಹೆಸರಿನಲ್ಲಿದೆ ಎಂದರೆ ಸಾಕ್ಷಿ ಸಗಣಿರಂಗಪ್ಪರವರ ಹೆಸರಿನಲ್ಲಿದೆ ಎಂದು ನುಡಿಯುತ್ತಾರೆ. 2001 ರಲ್ಲಿ ಅವರ ಹೆಸರಿಗೆ ಖಾತೆ ಬಂದಿರುತ್ತದೆ. ಅದಕ್ಕೂ ಪೂರ್ವದಲ್ಲಿ ಸದರಿ ಜಮೀನಿನ ಖಾತೆ ಗೋವಿಂದಪ್ಪ ಮತ್ತು ನರಸಪ್ಪರವರ ಹೆಸರಿನಲ್ಲಿತ್ತು. ಸಗಣಿರಂಗಪ್ಪರವರ ಹೆಸರಿಗೆ ಯಾವ ಆಧಾರದ ಮೇಲೆ ಖಾತೆ ಬಂತು ಎಂದರೆ ಸಾಕ್ಷಿ ಒಟ್ಟು ಕುಟುಂಬದಲ್ಲಿದ್ದಾಗ ಅವರು ಖರೀದಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಎಷ್ಟು ರೂಗಳಿಗೆ ಖರೀದಿ ಮಾಡಲಾಗಿದೆ ಎಂದರೆ ಸಾಕ್ಷಿ 2 ಲಕ್ಷಕ್ಕೆ ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರವನ್ನು ನಾನು ನೋಡಿರುವುದಿಲ್ಲ. ಸದರಿ ಕ್ರಯಪತ್ರದಲ್ಲಿ 2 ಲಕ್ಷ ರೂಗಳಿಗೆ ಖರೀದಿಸಲಾಗಿದೆ ಎಂದು ಬರೆದಿದ್ದಾರಾ ಎಂದರೆ ಸಾಕ್ಷಿ ನಾನು ಕ್ರಯಪತ್ರವನು ನೋಡಿಲ್ಲ ಆದರೆ 2 ಲಕ್ಷಕ್ಕೆ ಖರೀದಿ ಮಾಡಲಾಗಿದೆ ಎಂದು ನನ್ನ ಚಿಕ್ಕಪ್ಪ ದೊಡ್ಡಪ್ಪರವರು ಮಾತನಾಡುತ್ತಿದ್ದದ್ದನ್ನು ಕೇಳಿದ್ದೇನೆ ಎಂದು ನುಡಿಯುತ್ತಾರೆ. ಸರ್ವೆ ನಂ.152/2 ರ ಸ್ವತ್ತಿನ ಪಹಣಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸರ್ವೆ ನಂ.152/2 ರ ವಿಸ್ತೀರ್ಣ 1

ಎಕರೆ 28 ಗುಂಟೆ ಇದ್ದು ಸದರಿ ಸ್ವತ್ತನ್ನು 2 ಲಕ್ಷ ರೂಗಳಿಗೆ ಒಟ್ಟು ಕುಟುಂಬದಲ್ಲಿದ್ದಾಗ ಖರೀದಿಸಲಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿಗೆ ಸಂಬಂದಪಟ್ಟಂತೆ ನನಗೆ ಯಾವುದೇ ವಿಚಾರಗಳು ಗೊತ್ತಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.152/2 ರ ಸ್ವತ್ತಿಗೆ ಸಂಬಂದಪಟ್ಟಂತೆ ಪಹಣಿಯಾಗಲಿ, ಮ್ಯುಟೇಷನ್, ಕ್ರಯಪತ್ರವನ್ನಾಗಲಿ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಪಹಣಿ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ.

ನಿಪಿ-71 ರಂತೆ ಸರ್ವೆ ನಂ.177/1 ರ ಪಕ್ಕಾ ಪುಸ್ತಕದ ಎಕ್ಸ್‌ಟ್ರಾಕ್ಟನ್ನು ಹಾಜರುಪಡಿಸಿದ್ದು ಅದರ ಒಟ್ಟು ವಿಸ್ತೀರ್ಣ ಎಷ್ಟು ಎಂದರೆ ಸಾಕ್ಷಿ 1 ಎಕರೆ 25 ಗುಂಟೆ ಇರಬಹುದು ಎಂದು ನುಡಿಯುತ್ತಾರೆ. ಸದರಿ ಸ್ವತ್ತಿನ ಪಹಣಿ ಓಬಳಪ್ಪರವರ ಹೆಸರಿನಲ್ಲಿದೆ. ಸದರಿ ಸ್ವತ್ತು ಹೇಗೆ ಬಂತು ಎಂದರೆ ಪಿತ್ರಾರ್ಜಿತ ಸ್ವತ್ತು ಎಂದು ನುಡಿಯುತ್ತಾರೆ. ಸದರಿ ಸ್ವತ್ತಿನಲ್ಲಿ ಯಾರು ಯಾರು ಎಷ್ಟು ವಿಸ್ತೀರ್ಣದಲ್ಲಿ ಸ್ವಾಧೀನ ಇದ್ದಾರೆ ಎಂದರೆ ಸಾಕ್ಷಿ ಓಬಳಪ್ಪರವರು ಪೂರ್ಣ ಸ್ವತ್ತಿನಲ್ಲಿ ಸ್ವಾಧೀನ ಇದ್ದಾರೆ ಎಂದು ನುಡಿಯುತ್ತಾರೆ. ಓಬಳಪ್ಪರವರು ಬ್ಯಾಂಕಿನಲ್ಲಿ ಸದರಿ ಸ್ವತ್ತನ್ನು ಆಧಾರ ಮಾಡಿರುತ್ತಾರೆ ಎಂದರೆ ಸಾಕ್ಷಿ ನಾನು ಅದನ್ನು ನೋಡಿಲ್ಲ ಎಂದು ನುಡಿಯುತ್ತಾರೆ. ಸದರಿ ಸ್ವತ್ತಿನ ಪಹಣಿಯನ್ನು ನಾನು ನೋಡಿರುತ್ತೇನಾ ಎಂದರೆ ಸಾಕ್ಷಿ ನೋಡಿಲ್ಲ ಎಂದು ನುಡಿದು, ಸದರಿ ಸ್ವತ್ತನ್ನು ಆಧಾರ ಮಾಡಿರುವ ವಿಚಾರ ಸಹ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಕರಿಯಮ್ಮರವರ ಹೆಸರಿಗೆ ಹುಲ್ಲೇಹಳ್ಳಿ ಗ್ರಾಮದಲ್ಲಿ ಎಷ್ಟು ಮನೆ ಮತ್ತು ನಿವೇಶನಗಳು ಇದ್ದವು ಎಂದರೆ ಸಾಕ್ಷಿ ಒಟ್ಟು 14 ಮನೆ ಮತ್ತು ನಿವೇಶನ ಇರುವುದು ನನಗೆ ನೆನಪಿದೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಅವುಗಳ ಪಂಚಾಯಿತಿ ದಾಖಲೆಗಳ ಅಸೆಸ್ಮೆಂಟ್ ನಂಬರನ್ನು ಹೇಳಬಲ್ಲೆ

ಎಂದು ನುಡಿಯುತ್ತಾರೆ. ಪ್ರಸ್ತುತ ಸದರಿ ಸ್ವತ್ತುಗಳ ಖಾತೆಗಳು ಯಾರ ಯಾರ ಹೆಸರಿನಲ್ಲಿದೆ ಎಂದರೆ ಸಾಕ್ಷಿ ಓಬಳಪ್ಪ, ಸಗನಪ್ಪ, ಗೋವಿಂದಪ್ಪ, ಕುಮಾರಪ್ಪ, ತಿಮ್ಮಪ್ಪ ಮತ್ತು ಲೋಕೇಶಪ್ಪ ರವರ ಹೆಸರುಗಳಲ್ಲಿ ಇವೆ ಎಂದು ನುಡಿಯುತ್ತಾರೆ. ಮೇಲೆ ಹೇಳಿದವರ ಹೆಸರಿಗೆ ಯಾವ ಆಧಾರದ ಮೇಲೆ ಖಾತೆ ಬಂದಿವೆ ಎಂದರೆ ಸಾಕ್ಷಿ ಅವರು ಕರಿಯಮ್ಮರವರ ಮಕ್ಕಳಾಗಿರುವುದರಿಂದ ಅವರ ಹೆಸರಿಗೆ ಖಾತೆ ಬಂದಿವೆ ಎಂದು ನುಡಿಯುತ್ತಾರೆ. ಆ ರೀತಿ ಯಾವ ನೆಲೆಯಲ್ಲಿ ಖಾತೆಗಳು ಬದಲಾವಣೆಯಾಗಿದೆ ಎಂದು ನಾನು ಇಲ್ಲಿಯವರೆಗೆ ತಿಳಿದುಕೊಂಡಿದ್ದೇನಾ ಎಂದರೆ ಸಾಕ್ಷಿ ಪೌತಿ ಖಾತೆ ಆಧಾರದಲ್ಲಿ ಎಂದು ನುಡಿಯುತ್ತಾರೆ. ಪೌತಿ ನೆಲೆಯಲ್ಲಿ ಖಾತೆ ಬದಲಾವಣೆಯಾಗಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಕರಿಯಮ್ಮರವರ ಹೆಸರಿನಿಂದ ಅವರು ನಾಲ್ಕು ಜನ ಮಕ್ಕಳಾದ ಓಬಳಪ್ಪ ತಿಮ್ಮಪ್ಪ ಸಗನಪ್ಪ ಮತ್ತು ಗೋವಿಂದಪ್ಪರವರ ಹೆಸನಲ್ಲಿ ವಿಭಾಗದ ಆಧಾರದಲ್ಲಿ ಬಂದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಿಭಾಗವಾಗಿಲ್ಲ ಎಂದು ನುಡಿಯುತ್ತಾರೆ. ಗೋ ವಿಂದಪ್ಪರವರ ಹೆಸರಿಗೆ ವಿಭಾಗದಲ್ಲಿ ಬಂದಿರುವ ಆಸ್ತಿಗಳು ಅವರ ಮರಣ ನಂತರ ಅವರ ಮಕ್ಕಳ ಹೆಸರಿಗೆ ಖಾತೆ ಬದಲಾವಣೆಯಾಗಿರುತ್ತವೆ ಎಂದರೆ ಸಾಕ್ಷಿ ಪೌತಿ ಖಾತೆ ಮಾಡಿಸಿಕೊಂಡಿರುತ್ತಾರೆ, ಯಾವುದೇ ವಿಭಾಗವಾಗಿಲ್ಲ ಎಂದು ನುಡಿಯುತ್ತಾರೆ. ಅದೇರೀತಿ ಸಗನಪ್ಪರವರ ಹಿಸ್ಸೆಗೆ ಬಂದಂತಹ ಮನೆ ಮತ್ತು ನಿವೇಶನ ಅವರ ಮರಣ ನಂತರ ಅವರ ಮಗನಾದ ಸಗನಿರಂಗಪ್ಪರವರ ಹೆಸರಿಗೆ ಖಾತೆ ಬದಲಾವಣೆಗೊಂಡಿರುತ್ತದೆ ಎಂದರೆ ಸಾಕ್ಷಿ ಖಾತೆ ಬದಲಾವಣೆಯಾಗಿರುತ್ತದೆ ಆದರೆ ವಿಭಾಗವಾಗಿಲ್ಲ ಎಂದು ನುಡಿಯುತ್ತಾರೆ. ಖಾತೆ ಪ್ರಕಾರ ಅವರವರ ಸ್ವತ್ತುಗಳಲ್ಲಿ ಅವರವರು ಸ್ವಾಧೀನ ಇದ್ದಾರೆ ಎಂದರೆ ಸರಿಯಲ್ಲ. ಸಗನಿರಂಗಪ್ಪರವರ ಹೆಸರಿನಲ್ಲಿ ಖಾತೆ ಇರುವ

ಸ್ವತ್ತಿನಲ್ಲಿ ಯಾರು ಇದ್ದಾರೆ ಎಂದರೆ ಸಾಕ್ಷಿ ಓಬಳಪ್ಪ ಎಂದು ನುಡಿಯುತ್ತಾರೆ. ತಿಮ್ಮಪ್ಪರವರ ಹೆಸರಿನಲ್ಲಿ ಖಾತೆ ಇರುವ ಸ್ವತ್ತಿನಲ್ಲಿ ಯಾರು ಇದ್ದಾರೆ ಎಂದರೆ ಸಾಕ್ಷಿ ಓಬಳಪ್ಪ ಎಂದು ನುಡಿಯುತ್ತಾರೆ. ಕುಮಾರಪ್ಪ ಮತ್ತು ಶಿವಕುಮಾರ್ ರವರ ಹಿಸ್ಸೆಯ ಸ್ವತ್ತುಗಳಲ್ಲಿ ಪ್ರಸ್ತುತ ಯಾರು ಸ್ವಾಧೀನ ಇದ್ದಾರೆ ಎಂದರೆ ಸಾಕ್ಷಿ ಖಾತೆದಾರರೇ ಇದ್ದಾರೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.